ಅ.ದಾ.ನಂ.420/2016
ಪಿ.ಡಬ್ಲೂ:1

**ಸಾಕ್ಷಿಯನ್ನು ಇಂದು ದಿನಾಂಕಃ 17.10.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಮುಂದುವರೆದ ಪಾಟೀ ಸವಾಲುಃ ಶ್ರೀ. ವಿ ಬಿ ಎಮ್., ವಕೀಲರಿಂದ ಪ್ರತಿವಾದಿ ಪರವಾಗಿ**

3. ವಾದ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಗಳಲ್ಲಿ ನಾವು ನಿವೇಶನಗಳನ್ನು ಮಾಡಿರುತ್ತೇವೆ ಎಂದು ಹೇಳುತ್ತಾರೆ. ನಾನು 2012-2013 ನೇ ಸಾಲಿನಲ್ಲಿ ದಾವಾ ಆಸ್ತಿಯಲ್ಲಿ ನಿವೇಶನಗಳನ್ನು ಹಾಕಿರುತ್ತೇನೆ. ನಾನು ದಾವಾ ಅಸ್ತಿಯಲ್ಲಿ ನಿವೇಶನಗಳನ್ನು ಮಾಡಲು ಸಕ್ಷಮ ಪ್ರಾಧಿಕಾರದಿಂದ ಪರವಾನಿಗೆಯನ್ನು ಪಡೆದಿಲ್ಲ. ದಾವಾ ಆಸ್ತಿಯು ಒಟ್ಟು 9 ಎಕರೆ ಜಮೀನು ಇರುತ್ತದೆ. ನಾನು ದಾವಾ ಆಸ್ತಿಯಲ್ಲಿ ನಿವೇಶನಗಳನ್ನು ಮಾಡಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ದಾವಾ ಆಸ್ತಿಯಲ್ಲಿ ಒಟ್ಟು 1 ರಿಂದ 250 ರವರೆಗೆ ನಿವೇಶನಗಳನ್ನು ಮಾಡಿರುತ್ತೇನೆ. ನಾನು 1 ರಿಂದ 250 ರ ನಿವೇಶನಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯು ಕಪ್ಪು ಮಣ್ಣು ಇರುವುದರಿಂದ ಒಕ್ಕಲುತನಕ್ಕೆ ಯೋಗ್ಯವಾಗಿರುತ್ತದೆ ಎಂದರೆ ಸರಿ.

4. ಸಾಮಾನ್ಯವಾಗಿ ಕೃಷಿ ಜಮೀನಿನಲ್ಲಿ ನಿವೇಶನಗಳನ್ನು ಮಾಡಬೇಕಾದರೆ ಸಂಬಂಧಪಟ್ಟ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ ಎಂದರೆ ಸರಿ. ನೀವು ನಿವೇಶನಗಳನ್ನು ಮಾಡಲು ಏಕೆ ಪರವಾನಿಗೆಯನ್ನು ಪಡೆದಿಲ್ಲ ಎಂದರೆ ಸಾಕ್ಷಿಯು ನಾನು ಪರವಾನಿಗೆಯನ್ನು ಪಡೆದಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯರು ನನಗೆ ನಿವೇಶನಗಳನ್ನು ಮಾಡದಂತೆ ನೋಟಿಸ್ ನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಭೂ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಹಣ ಮಂಜೂರು ಆಗಿತ್ತು ಎಂದರೆ

ಸರಿಯಲ್ಲ. ದಾವಾ ಆಸ್ತಿಗೆ ಪ್ರತಿ ಎಕರೆಗೆ 1 ಲಕ್ಷ 85 ಸಾವಿರ ರೂಪಾಯಿದಂತೆ ಹಣ ಮಂಜೂರು ಆಗಿತ್ತು ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ನಿವೇಶನಗಳನ್ನು ಮಾಡಲು ಅಧಿಕಾರ ಇಲ್ಲದೇ ಇದ್ದರೆ ಕೂಡಾ ನಿವೇಶನಗಳನ್ನು ಮಾಡಿರುತ್ತೇನೆ ಎಂದರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ನಿವೇಶನಗಳನ್ನು ಮಾಡಿರುತ್ತೇನೆ ಎಂದು ಹೇಳುತ್ತಾರೆ.

5. ನಾನು ಮಾಡಿರುವ ನಿವೇಶನಗಳ ಮೌಲ್ಯ ಎಷ್ಟು ಆಗುತ್ತದೆಎಂಬುದು ನನಗೆ ಗೊತ್ತಿಲ್ಲ. ನನಗೆ ಬೇಕಾದರವರಿಗೆ ನಾನು ಉಚಿತವಾಗಿ ನಿವೇಶನಗಳನ್ನು ಕೊಟ್ಟಿರುತ್ತೇನೆ. ನಾನು ಯಾರಿಗೆ ನಿವೇಶನಗಳನ್ನು ಉಚಿತವಾಗಿ ಕೊಟ್ಟಿರುತ್ತೇನೆ ಅವರು ಹೆಸರುಗಳು ನನಗೆ ಗೊತ್ತಿಲ್ಲ. ನಾನು ಉಚಿತವಾಗಿ ನಿವೇಶಗಳನ್ನು ಕೊಟ್ಟಿರುವ ಬಗ್ಗೆ ಬಕ್ಷಿಸ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

6. ದಾವಾ ಆಸ್ತಿಯ ಸರ್ವೆ ನಂ.338 ಒಟ್ಟು ವಿಸ್ತೀರ್ಣ 19 ಎಕರೆ 28 ಗುಂಟೆ ಇರುತ್ತದೆ ಎಂದರೆ ಸರಿ. ದಿಃ17.05.2016 ರಂದು ಜಿಲ್ಲಾ ಅಧಿಕಾರಿಗಳು ವಿಜಯಪೂರವರು ಆಸ್ತಿಯ ಮಾಲೀಕರನ್ನು ಅಳತೆಗಾಗಿ ಕರೆದಿದ್ದರು ಎಂದರೆ ಸರಿ. ಸದರಿ ಆಸ್ತಿಯ ಮಾಲೀಕರುಗಳು ಜಿಲ್ಲಾ ಅಧಿಕಾರಿಗಳಿಗೆ ನಮ್ಮ ಆಸ್ತಿಗಳನ್ನು ಸರ್ಕಾರಕ್ಕೆ ಕೊಡಲು ಒಪ್ಪಿಗೆ ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮಾಲೀಕರುಗಳು ಜಮೀನನ್ನು ಸರ್ಕಾರಕ್ಕೆ ಕೊಡಲು ಒಪ್ಪಿದ್ದರಿಂದ ಪರಿಹಾರ ಹಣ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ಹಣ ಜಮಾ ಆಗಿರುವ ವಿಷಯಗಳು ಎಲ್ಲಾ ವಾದಿಯರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ.

7. ವಾದಿಯರು ದಾವಾ ಆಸ್ತಿಯನ್ನು ಅತೀಕ್ರಮಣ ಮಾಡಿರುವುದು ಅಲ್ಲದೇ ರಸ್ತೆಯನ್ನು ಸಹ ಅತೀಕ್ರಮಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯನ್ನು ನಾಗಮ್ಮ ಗಂ. ನರಸಿಂಗಪ್ಪ ಚೌಧರಿರವರ ಕಡೆಯಿಂದ ಖರೀದಿಸಿರುತ್ತೇನೆ. ಈ ಕುರಿತು ನಾನು

ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ನಾವು ಮಾಡಿರುವ ನಿವೇಶನಗಳಲ್ಲಿ ಸಂಪೂರ್ಣವಾಗಿ ಕಟ್ಟಗಳು ನಿರ್ಮಾಣವಾಗಿರುತ್ತವೆ. ದಾವಾ ಆಸ್ತಿಯಲ್ಲಿ ಒಟ್ಟು ಮೂರು ಕಟ್ಟಡಗಳು ಆಗಿರುತ್ತವೆ. ದಾವಾ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರುಗಳು ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರುಗಳು ಪಂಚಾಯತಿಯಿಂದ ಯಾವುದೇ ಪರವಾನಿಗೆಯನ್ನು ಪಡೆದಿಲ್ಲ ಮತ್ತು ಪಂಚಾಯತಿಯಲ್ಲಿ ಕೂಡಾ ನಮೂದು ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

8. ದಾವಾ ಆಸ್ತಿಯ ಒಟ್ಟು ಮೌಲ್ಯವು 1 ಕೋಟಿಗಿಂತ ಜಾಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ನಿವೇಶನಗಳನ್ನು ಮಾಡಲು ಹಕ್ಕು ಮತ್ತು ಅಧಿಕಾರ ಇಲ್ಲದೇ ಇದ್ದರೂ ಕೂಡಾ ಸರ್ಕಾರಕ್ಕೆ ಮೋಸ ಮಾಡಲು ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಮತ್ತು ನನಗೆ ಯಾವುದೇ ರೀತಿ ಸಂಬಂಧ ಇಲ್ಲದೇ ಇದ್ದರೂ ಕೂಡಾ ವಾದಿಯರು ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ವಾದಿಯರಿಗೆ ಈ ದಾವೆಯನ್ನು 2016 ರಲ್ಲಿ ಮಾಡಿರುತ್ತಾರೆ. ಆದರೆ ಯಾವ ದಿನಾಂಕ ಮತ್ತು ಯಾವ ತಿಂಗಳು ಈ ದಾವೆಯಲ್ಲಿ ದಾಖಲು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**